# ಹೊಸತು




## ರುಚಿಕರ ಸ್ವಾದದ ಚಾಕೊಲೇಟ್

ಫೆರೆರೊ ರೋಚರ್ ಚಾಕೊಲೇಟ್ ಹೊಸ ಸ್ವಾದದೊಂದಿಗೆ ಮಾರುಕಟ್ಟೆಗೆ ಬಂದಿದೆ. ರಕ್ಷಾಬಂಧನ ನೆಪದಲ್ಲಿಟ್ಟುಕೊಂಡು ಸ್ನೇಹಿತರಿಗೆ, ಅಣ್ಣ ತಂಗಿಯರಿಗೆ ಉಡುಗೊರೆ ನೀಡಲೆಂದೇ ಇದನ್ನು ತಯಾರಿಸಲಾಗಿದೆ. ಹೊಸ ಸ್ವಾದ, ಸ್ವಾದಿಷ್ಟ ರುಚಿಯೊಂದಿಗೆ ವಿಭಿನ್ನವಾಗಿ ಮಾರುಕಟ್ಟೆಗೆ ಬಿಡುಗಡೆಗೊಂಡ ಈ ಚಾಕೊಲೇಟ್‌ಗಳು 5, 16 ಮತ್ತು 24 ಪ್ಯಾಕ್‌ಗಳಲ್ಲಿ ಲಭ್ಯ. ಮಾಹಿತಿಗೆ: 97422 72209



## ಫಾರ್‌ಸೆವೆನ್‌ನಿಂದ ಒಡವೆ

ಫ್ಯಾಷನೆಬಲ್ ಒಡವೆ ಮತ್ತು ಇತರ ಆ್ಯಸೆಸರೀಸ್‌ಗಳಿಗೆ ಹೆಸರಾದ ಫಾರ್‌ಸೆವೆನ್ ಇದೀಗ ಹೊಸ ಬಗೆಯ ನೂತನ ವಿನ್ಯಾಸದ ಒಡವೆಗಳನ್ನು ಮಾರುಕಟ್ಟೆಗೆ ತಂದಿದೆ. ಫ್ರೆಂಡ್‌ಶಿಪ್ ಡೆ ನೆಪ ಇಟ್ಟುಕೊಂಡು ಇದೀಗ ಹೊರ ತಂದಿರುವ ಒಡವೆಗಳಲ್ಲಿ ಕಿವಿಯೋಲೆ, ಬ್ರೇಸ್‌ಲೆಟ್, ಬ್ಯಾಂಡ್ ಮುಂತಾದವುಗಳು ಸೇರಿವೆ. ಬೆಲೆ 500 ರೂಪಾಯಿ ಮೇಲ್ಪಟ್ಟು. ವಿವರಕ್ಕೆ: 8867622411




## ಫಿಲಿಪ್ಸ್‌ನಿಂದ ಮತ್ತೊಂದು ಏರ್ ಫ್ರೈಯರ್

ಫಿಲಿಪ್ಸ್ ಇದೀಗ ಮತ್ತೊಂದು ಹೊಸ ಬಗೆಯ ಏರ್ ಫ್ರೈಯರ್ ಅನ್ನು ಮಾರುಕಟ್ಟೆಗೆ ತಂದಿದೆ. ಇದು ಈ ಹಿಂದೆ ಬಿಡುಗಡೆ ಮಾಡಿದ್ದ ಏರ್‌ಫ್ರೈಯರ್‌ಗಿಂತಲೂ ಭಿನ್ನವಾಗಿದ್ದು, ಡೀಪ್ ಫ್ರೈ ಮಾಡಿಯೇ ತಿನ್ನಬೇಕಾಗಿದ್ದ ಸಮೋಸ, ಕಚೋರಿಗಳನ್ನು ಸಹ ಈ ಫ್ರೈಯರ್ ಮೂಲಕ ಸುಲಭದಲ್ಲಿ ಕರಿದು ತಿನ್ನಬಹುದು. ಇದರಿಂದ ಕೊಲೆಸ್ಟ್ರಾಲ್ ಭೀತಿಯಿಂದಲೂ ಪಾರಾಗಬಹುದು. ಅತ್ಯಾಧುನಿಕ ತಂತ್ರಜ್ಞಾನಗಳಿಂದ ಇದನ್ನು ತಯಾರಿಸಲಾಗಿದ್ದು, ಪ್ರತಿಯೊಬ್ಬ ಗೃಹಿಣಿಗೂ ಅಡುಗೆ ಮನೆಯಲ್ಲಿ ಇರಲೇಬೇಕಾದಂಥ ಸೂಕ್ತ ಸಾಧನವಾಗಿದೆ ಎನ್ನುವುದು ಕಂಪೆನಿ ವಿವರಣೆ.




## ಆಪ್ಟಿಮ್ ಹೆಲ್ತ್ ಉತ್ಪನ್ನ

ಎವಿಟಿ ನ್ಯಾಚುರಲ್ ಹೆಲ್ತ್ ಕಂಪೆನಿ ಇದೀಗ ಆಪ್ಟಿಮ್ ಹೆಲ್ತ್ ಎಂ.ಬ ಹೆಸರಿನ ಆರೋಗ್ಯ ಉತ್ಪನ್ನವೊಂದನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಒತ್ತಡ ನಿವಾರಣೆ, ನಿರೋಧಕ ಶಕ್ತಿ ಹೆಚ್ಚಳ, ಜೀರ್ಣ ಶಕ್ತಿ ಹೆಚ್ಚಳ, ಮಲ್ಟಿ ವಿಟಮಿನ್, ಹೃದ್ರೋಗ ಸಮಸ್ಯೆ ನಿವಾರಣೆ, ಮಧುಮೇಹ ಮುಂತಾದ ಸಮಸ್ಯೆಗಳನ್ನು ಹೋಗಲಾಡಿಸಲು ಸಹಕಾರಿ ಎಂದು ಕಂಪೆನಿ ಹೇಳಿದೆ. ನೈಸರ್ಗಿಕ ವಸ್ತುಗಳನ್ನು ಬಳಸಿ ತಯಾರಿಸಲಾಗಿದೆ.



## ಡಿಜಿಟಲ್ ವಾಲ್ ಟೈಲ್ಸ್

ನಿಟ್ಕೊ ಕಂಪೆನಿ ಇದೀಗ ರಾಯಲ್ ಟ್ರೆಶರ್, ಪ್ರಕೃತಿ ಸೌಂದರ್ಯ ಅದ್ಭುತಗಳನ್ನು ಪ್ರತಿಬಿಂಬಿಸುವ ಡಿಜಿಟಲ್ ವಾಲ್ ಟೈಲ್ಸ್‌ಗಳನ್ನು ಬಿಡುಗಡೆ ಮಾಡಿದೆ. ಆಹ್ಲಾದಕರ ಬಣ್ಣ ಮತ್ತು ವಿನ್ಯಾಸಗಳನ್ನು ಒಳಗೊಂಡಿದ್ದು, ಇವು ಗೋಡೆಗಳನ್ನು ಕಲಾತ್ಮಕ ಕ್ಯಾನ್ವಾಸದದಗಳಾಗಿ ಪರಿವರ್ತಿಸುತ್ತವೆ ಎನ್ನುತ್ತದೆ ಕಂಪೆನಿ. ಆಧುನಿಕ ಯುಗದ 6 ವರ್ಣಗಳ ಪ್ರಿಸಂ ಮುದ್ರಣ ಎಚ್ಡಿ ಡಿಜಿಟಲ್ ತಂತ್ರಜ್ಞಾನ ಬಳಸಿ, ಕಲ್ಲು ಮತ್ತು ಮರದಂಥ ಬಣ್ಣಗಳ ಪಡಿಯಚ್ಚನ್ನು ಒದಗಿಸಿ ಅತ್ಯಂತ ಸೂಕ್ಷ್ಮ ವಿವರಗಳನ್ನೂ ಜೀವಂತಗೊಳಿಸುತ್ತದೆ ಎನ್ನುವುದು ಕಂಪೆನಿ ವಿವರಣೆ.

ಐದು ವೈವಿಧ್ಯಗಳಲ್ಲಿ ಲಭ್ಯ. ಇವೆಲ್ಲವೂ ಕಲೆ ನಿರೋಧಕ ಗುಣಗಳಿಂದ ಕೂಡಿದ್ದು ದೀರ್ಘ ಬಾಳಿಕೆ ಬರುತ್ತವೆ. ಅಲ್ಲದೆ ಧೂಳು ನಿರೋಧಕ ಟೈಲ್ಸ್ ಕೂಡ ಇದಾಗಿದೆ. ವಿವರಕ್ಕೆ: 1800-209-9898